■ ಶಶಿಕುಮಾರ್ ಸಿ.

# ವಾಟ್ಸ್‌ಆ್ಯಪ್ ವೆಬ್: ವಾಯ್ಸ್-ವಿಡಿಯೊ ಕರೆ

ವಾಟ್ಸ್‌ಆ್ಯಪ್ ವೆಬ್‌ನಲ್ಲಿ ಎದ್ದುಕಾಣುತ್ತಿದ್ದ ವಾಯ್ಸ್–ವಿಡಿಯೊ ಕರೆ ಸೌಲಭ್ಯ ಕೊರತೆಯನ್ನು ನೀಗಿಸಲು ಕಂಪನಿ ಮುಂದಾಗಿದ್ದು, ಶೀಘ್ರವೇ ಈ ಸೌಲಭ್ಯವು ಬಿಡುಗಡೆಗೊಳ್ಳಲಿದೆ. ಮೊಬೈಲ್ ಆವೃತ್ತಿಯಂತೆಯೇ ವೆಬ್ ಆವೃತ್ತಿಯನ್ನು ಬಳಕೆದಾರರಿಗೆ ಹೆಚ್ಚು ಆಪ್ತವಾಗಿಸಲು ವಾಟ್ಸ್‌ಆ್ಯಪ್ ಹೆಜ್ಜೆಯಿಟ್ಟಿದೆ.

ವೆಬ್ ಆವೃತ್ತಿಯನ್ನು ಪರಿಚಯಿಸಿ ಹಲವು ವರ್ಷಗಳೇ ಕಳೆದಿವೆ. ಮೊಬೈಲ್ ಆವೃತ್ತಿಯಲ್ಲಿ ಲಭ್ಯವಿರುವ ಫೀಚರ್‌ಗಳೆಲ್ಲವನ್ನೂ ವೆಬ್ ಆವೃತ್ತಿಯಲ್ಲೂ ಕಾಣಿಸುವಂತೆ ಮಾಡಲು ವಾಟ್ಸ್‌ಆ್ಯಪ್ ಪ್ರಯತ್ನ ಮಾಡುತ್ತಲೇ ಇದೆ. ಆದರೆ, ಹಲವು ವರ್ಷಗಳ ಹಿಂದೆಯೇ ವಾಯ್ಸ್–ವಿಡಿಯೊ ಕರೆ ಸೌಲಭ್ಯವನ್ನು ಮೊಬೈಲ್ ಆವೃತ್ತಿಯಲ್ಲಿ ಪರಿಚಯಿಸಿದ್ದರೂ ಅದು ವೆಬ್ ಆವೃತ್ತಿಯಲ್ಲಿ ಕಾಣಿಸಿಕೊಂಡಿರಲಿಲ್ಲ. ಈ ಬಗ್ಗೆ ಆಕ್ಷೇಪ ವ್ಯಕ್ತವಾಗಿತ್ತು. ಕೊನೆಗೂ ಈ ಫೀಚರ್ ವೆಬ್‌ಗೆ ಕಾಲಿಡುವ ಕಾಲ ಸನಿಹಗೊಂಡಿದೆ.

ವಾಟ್ಸ್‌ಆ್ಯಪ್ ವೆಬ್ ಅನ್ನು ಪ್ರಾಥಮಿಕವಾಗಿ ಸಂದೇಶ, ವಿಡಿಯೊ, ಫೋಟೊ ಕಳುಹಿಸಲಷ್ಟೇ ಬಳಸಲಾಗುತ್ತಿದೆ. ವಾಟ್ಸ್‌ಆ್ಯಪ್ ಮೂಲಕ ಕರೆ ಮಾಡಲು ಮೊಬೈಲ್ ಅಪ್ಲಿಕೇಷನ್ ಅನ್ನೇ ಆಶ್ರಯಿಸಬೇಕಿದೆ. ಮುಂಬರುವ ಹೊಸ ಅಪ್‌ಡೇಟ್‌ನಲ್ಲಿ ವೆಬ್ ಆವೃತ್ತಿಯ ಮೂಲಕವೇ ನೇರವಾಗಿ ವಾಯ್ಸ್ ಮತ್ತು ವಿಡಿಯೊ ಕರೆಗಳನ್ನು ಮಾಡಬಹುದಾಗಿದೆ. ಲ್ಯಾಪ್‌ಟಾಪ್ ಅಥವಾ ಶೇರಿಂಗ್ ಸಿಸ್ಟಂನಲ್ಲೂ ಇದು ಪ್ರಯೋಜನಕಾರಿಯಾಗಲಿದೆ.

ಗ್ರೂಪ್ ಕಾಲ್ಸ್ ಮಾಡಲೂ ಅವಕಾಶ ಸಿಗಲಿದೆ. ಆದರೆ, ಎಷ್ಟು ಮಂದಿಯೊಂದಿಗೆ ಗ್ರೂಪ್ ಕಾಲ್ಸ್ ಮಾಡಬಹುದು ಎಂಬುದರ ಬಗ್ಗೆ ಸ್ಪಷ್ಟತೆ ಸಿಕ್ಕಿಲ್ಲ. ವಾಬೇಟಾಇನ್ಫೊ ಪ್ರಕಾರ, 'ಕರೆಗಳ ಸ್ಥಿರತೆ ಕಾಪಾಡಲು ವೆಬ್ ಆವೃತ್ತಿಯಲ್ಲಿ ಗ್ರೂಪ್ ಕಾಲ್ಸ್‌ನಲ್ಲಿ ಭಾಗವಹಿಸುವವರ ಮಿತಿ ಆರಂಭದಲ್ಲಿ ಕಡಿಮೆಯಾಗಬಹುದು' ಎನ್ನಲಾಗಿದೆ. 32 ಜನರು ಒಟ್ಟಿಗೆ ಗ್ರೂಪ್ ಕಾಲ್ಸ್ ಮಾಡಲು ಮೊಬೈಲ್ ಆವೃತ್ತಿಯು ಬೆಂಬಲಿಸುತ್ತದೆಯಾದರೂ, ವೆಬ್ ಆವೃತ್ತಿಯು ಆರಂಭದಲ್ಲಿ ಇದನ್ನು 8 ಅಥವಾ 16 ಜನರಿಗಷ್ಟೇ ಮಿತಿಗೊಳಿಸಬಹುದು. ಈ ಬಗ್ಗೆ ಕಂಪನಿ ಅಧಿಕೃತವಾಗಿ ದೃಢಪಡಿಸಿಲ್ಲ.

## ಕಾಲ್ ಲಿಂಕ್ ಸಪೋರ್ಟ್ ನಿರೀಕ್ಷೆ

ಕಾಲ್ ಲಿಂಕ್ ಸಪೋರ್ಟ್ ವೆಬ್‌ನಲ್ಲಿಯೂ ಲಭ್ಯವಿರಲಿದೆ ಎಂಬ ನಿರೀಕ್ಷೆಯು ಹೊಸ ಅಪ್‌ಡೇಟ್ ಪಟ್ಟಿಯ ಮೇಲಿದೆ. ಈ ಫೀಚರ್ ಬಳಸಿ ಗ್ರೂಪ್ ಕಾಲ್ಸ್‌ಗಾಗಿ ಹಂಚಿಕೊಳ್ಳಬಹುದಾದ ಲಿಂಕ್ ಅನ್ನು ರಚಿಸಬಹುದು. ಇದು ಜನರನ್ನು ವಿಡಿಯೊ ಕರೆಗಳೊಂದಿಗೆ ಸೇರಲು ಅವಕಾಶ ಮಾಡಿಕೊಡುತ್ತದೆ. ಬಹುದೊಡ್ಡ ಸಂಖ್ಯೆಯ ಗ್ರೂಪ್ ಕಾಲ್ಸ್ ನಿರ್ವಹಣೆಯನ್ನು ಇದು ಸುಲಭಗೊಳಿಸುತ್ತದೆ. ಜೂಮ್, ಗೂಗಲ್ ಮೀಟ್‌ನಂತಹ ಪ್ಲಾಟ್‌ಫಾರ್ಮ್‌ಗಳೊಂದಿಗೆ ಸ್ಪರ್ಧಿಸುವ ಕಸರತ್ತನ್ನು ವಾಟ್ಸ್‌ಆ್ಯಪ್ ನಡೆಸುತ್ತಿದೆ.

ವೆಬ್ ಆವೃತ್ತಿಯಲ್ಲಿ ಕಾಲ್ ಶೆಡ್ಯೂಲಿಂಗ್ ಆಯ್ಕೆಯೂ ಲಭ್ಯವಾಗಲಿದೆ ಎನ್ನುವ ವದಂತಿಯೊಂದಿದೆ. ಇದು ನಿಜವಾದಲ್ಲಿ, ಕರೆ ಮಾಡಬೇಕಾದವರ ಹೆಸರು, ವಿವರಣೆ, ಪ್ರಾರಂಭ ಸಮಯ, ನಿರೀಕ್ಷಿತ ಸಮಯವನ್ನು ಪೂರ್ವನಿರ್ಧರಿತವಾಗಿ ಸೆಟ್ ಮಾಡಿ ಆಯಾ ಸಮಯಕ್ಕೆ ಕರೆ ತಲುಪುವಂತೆ ಮಾಡಬಹುದು. ■

# 5ಜಿ ಬಳಕೆ; ಭಾರತ ದ್ವಿತೀಯ




ಭಾರತವೀಗ ವಿಶ್ವದ ಎರಡನೆಯ 5ಜಿ ಚಂದಾದಾರರ ನೆಲೆ ಎಂದರೆ ನೀವು ನಂಬುತ್ತೀರಾ? ನಂಬಲೇಬೇಕು. ಸದ್ಯ 400 ಮಿಲಿಯನ್‌ಗಿಂತಲೂ ಹೆಚ್ಚು 5ಜಿ ಬಳಕೆದಾರರನ್ನು ಭಾರತವು ಹೊಂದಿದೆ.

5ಜಿ ಇಂಟರ್‌ನೆಟ್ ಲೋಕದಲ್ಲಿ ಹೊಸ ದಾಖಲೆ ಬರೆದಿದ್ದು, ಈ ನೆಟ್‌ವರ್ಕ್ ಅನ್ನು ತ್ವರಿತವಾಗಿ ವಿಸ್ತರಣೆ ಮಾಡುತ್ತಿರುವ ಭಾರತವು ಡಿಜಿಟಲ್ ವೇಗಕ್ಕೆ ಆದ್ಯತೆ ನೀಡುತ್ತಿದೆ. ಇದರ ಫಲವಾಗಿ ಕೆಲವೇ ವರ್ಷಗಳಲ್ಲಿ ಕೋಟ್ಯಂತರ ಬಳಕೆದಾರರು 5ಜಿಗೆ ತಮ್ಮ ಪಥ ಬದಲಿಸಿದ್ದಾರೆ. ಈ ತ್ವರಿತ ಬೆಳವಣಿಗೆಯು ಭಾರತವು 5ಜಿ ಬಳಕೆದಾರರ ವಿಷಯದಲ್ಲಿ ಅಮೆರಿಕ, ಜಪಾನ್‌ನಂತಹ ದೇಶಗಳನ್ನೂ ಹಿಂದಿಕ್ಕಿ, ಜಾಗತಿಕವಾಗಿ ಮೈಲಿಗಲ್ಲು ರೂಪಿಸಿದೆ. ಈ ಬಗ್ಗೆ ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಡಿಜಿಟಲ್ ಕ್ರಾಂತಿಯ ಫಲವಾಗಿ 5ಜಿ ತಂತ್ರಜ್ಞಾನದ ಲಾಭವನ್ನು ದೇಶದ ಇಂಟರ್‌ನೆಟ್ ಬಳಕೆದಾರರು ಅನುಭವಿಸುತ್ತಿದ್ದಾರೆ. 5ಜಿಯತ್ತ ಭಾರತ ಹೊರಳಿದ ಕೇವಲ ಮೂರು ವರ್ಷಗಳಲ್ಲಿ, 400 ಮಿಲಿಯನ್‌ಗಿಂತಲೂ ಹೆಚ್ಚು ಬಳಕೆದಾರರು ಈ ಸಂಪರ್ಕ ಹೊಂದಿದ್ದಾರೆ. ಸ್ಮಾರ್ಟ್‌ಫೋನ್‌ಗಳಿಂದ ಹಿಡಿದು ಉದ್ಯಮ, ಆರೋಗ್ಯ ರಕ್ಷಣೆ ಮತ್ತು ಶಿಕ್ಷಣದವರೆಗೆ 5ಜಿಯು ಹರಡಿದ್ದು, ದೇಶದ ಡಿಜಿಟಲ್ ಶಕ್ತಿಗೆ ಹೊಸ ಇಂಬು ಸಿಕ್ಕಂತಾಗಿದೆ.

ಮೊದಲ ಸ್ಥಾನದಲ್ಲಿ ಚೀನಾವಿದ್ದು, 1.1 ಬಿಲಿಯನ್ 5ಜಿ ಬಳಕೆದಾರರನ್ನು ಹೊಂದಿದೆ. ನಂತರದ ಸ್ಥಾನದಲ್ಲಿ ಭಾರತವಿದ್ದು, ಕ್ರಮವಾಗಿ ಅಮೆರಿಕ 350 ಮಿಲಿಯನ್, ಯೂರೋಪ್ 200 ಮಿಲಿಯನ್, ಜಪಾನ್ 190 ಮಿಲಿಯನ್ ಬಳಕೆದಾರರನ್ನು ಹೊಂದಿದೆ. ಭಾರತವು 2026ರ ಅಂತ್ಯದ ವೇಳೆಗೆ 394 ಮಿಲಿಯನ್ ಬಳಕೆದಾರರನ್ನು ತಲುಪುವ ಅಂದಾಜಿತ್ತು. 2026ರ ಪ್ರಾರಂಭದಲ್ಲಿ ಅಂದಾಜನ್ನು ಮೀರಿ ಮುನ್ನುಗ್ಗುತ್ತಿದೆ.

## 2022ರಲ್ಲಿ ಶುರುವಾದ 5ಜಿ ಯುಗ

2022ರ ವೇಳೆಗೆಲ್ಲ ವಿಶ್ವದ ಬಹುತೇಕ ದೇಶಗಳು 5ಜಿ ನೆಟ್‌ವರ್ಕ್‌ನ ಹಿಂದೆ ಬಿದ್ದಿದ್ದವು. ಭಾರತ ಆಗಷ್ಟೇ ಮೈಕೊಡವಿಕೊಂಡು 2022ರಲ್ಲಿ 5ಜಿಗೆ ಕಾಲಿಟ್ಟಿತ್ತು. ಇಂಡಿಯಾ ಮೊಬೈಲ್ ಕಾಂಗ್ರೆಸ್ ಸಮಯದಲ್ಲಿ 5ಜಿ ಸೇವೆಗಳನ್ನು ದೇಶದಲ್ಲಿ ಪ್ರಾರಂಭಿಸಲಾಯಿತು. 5ಜಿ ಕಲ್ಪಿಸುವ ಉದ್ದೇಶವೇ ಬಳಕೆದಾರರಿಗೆ ಹೈಸ್ಪೀಡ್ ಇಂಟರ್‌ನೆಟ್, ಕಡಿಮೆ ಲ್ಯಾಗ್ ಮತ್ತು ಹೊಸ ಡಿಜಿಟಲ್ ಸೇವೆಗಳನ್ನು ಉತ್ತೇಜಿಸುವುದು, ಡಿಜಿಟಲ್ ಇಂಡಿಯಾ ದೃಷ್ಟಿಯನ್ನು ಬಲಪಡಿಸುವುದಾಗಿತ್ತು.

ರಿಲಯನ್ಸ್ ಜಿಯೊ ಮೊದಲು 'ಜಿಯೊ ಟ್ರೂ 5ಜಿ ನೆಟ್‌ವರ್ಕ್' ಪ್ರಾರಂಭಿಸಿತು. ನಂತರ ಏರ್‌ಟೆಲ್, ವೊಡಾಫೋನ್–ಐಡಿಯಾ 5ಜಿಗೆ ಕಾಲಿಟ್ಟವು. ಈ ಎಲ್ಲಾ ಟೆಲಿಕಾಂ ಕಂಪನಿಗಳು ಹೊಸ ಟವರ್‌ಗಳು, ಫೈಬರ್ ನೆಟ್‌ವರ್ಕ್‌ಗಳು, 5ಜಿ ತಂತ್ರಜ್ಞಾನ ಮತ್ತು ಪ್ರಮಾಣಿತವಲ್ಲದ ಬಳಕೆಯ ನೆಟ್‌ವರ್ಕ್‌ಗಳಲ್ಲಿ ಭಾರಿ ಹೂಡಿಕೆ ಮಾಡಿವೆ. ■